ತಾರೀಖು 21ನೇ ಮಾರ್ಚ 1896.

ನಂ. 8722.—ಯಕ್ಸ್ 264.—1881ನೇ ಇಸವಿ XXIIನೇ ನಂಬರ್ ಯಕ್ಸೈಜ್ ಆಕ್ಟ್ 55ನೇ ಸೆಕ್ಷನ್ ನಿಯಮಗಳ ನುಸರಿಸಿ ಮೈಸೂರು ಗವರ್ನಮೆಂಟಿನವರು ಅಜ್ಞಾಪಿಸುವದೇನಂದರೆ:—ಕೇಂದಿ ಇಜಾರದಾರ್ ಮತ್ತು ಕೇಂದಿ ದುರ್ಕಾದಾರರುಗಳಿಗೆ ಕೊಡಲ್ಪಡುವ ಲೈಸೆನ್ಸುಗಳ ಪ್ರತ್ತುಗಳಲ್ಲಿ ಇದರಡಿ ಕಂಡ ತಿದ್ದುಪಾಟುಗಳು ಕೇರಿಸಲ್ಪಡತಕ್ಕದ್ದು.

1893ನೇ ಇಸವಿ ಜನವರಿ 14ನೇ ಮಾರ್ಕ್ಹಂ 11813—ರೆ. ಫೈ. 233—92ನೇ ನಂಬರ್ ಇಸ್ತಿಹಾರ್‌ನಾಮೆಯ A ಆರ್ಟಿಕ್ಲ್ ಆದ ಕೇಂದಿ ಇಜಾರೆದಾರರ ಲೈಸೆನಿನ 21ನೇ ಕಲಂನಲ್ಲಿ,—

"ಕೇಂದಿಯು ಗಿಡಗಳಿಂದ ಇಳಿಸಲ್ಪಟ್ಟಂತೆ ಜನಗಳಿಗೆ ಬಿಕರೀ ಮಾಡಲ್ಪಡತಕ್ಕದ್ದು, ಮತ್ತು ಬಲ ತಗ್ಗಿಸಲ್ಪಡಕೂಡದು ಮತ್ತು "ಪರಿಕೆ ಮಾಡಲ್ಪಡಕೂಡದು" ಯಂಬದಕ್ಕೆ ಬದಲಾಗಿ ಇದರಡಿ ಬರುವದನ್ನು ಕೇರಿಸತಕ್ಕದ್ದು:—

"ಬಲ ತಗ್ಗಿಸಲ್ಪಟ್ಟ ಅಥವಾ ಪರಿಕೆ ಮಾಡಲ್ಪಟ್ಟ ಕೇಂದಿಯಾಗಲೀ ಅಥವಾ ಯಾರಾ ದಿವಸಗಳಿಗೆ ಮುಂಚಿತವಾಗಿ ಇಳಿಸಲ್ಪಟ್ಟ "ಕೇಂದಿಯಾಗಲಿ ಬಿಕರಿ ಮಾಡಲ್ಪಡಕೂಡದು ಯಾ ಬಿಕರಿ ಬಗ್ಗೆ ಕೊಡಲ್ಪಡಕೂಡದು ಅಥವಾ ದುಕಾನಿನಲ್ಲಿ ಇಡಲ್ಪಡಕೂಡದು."

2. 1893ನೇ ಇಸವಿ ಜನವರಿ 14ನೇ ಮಾರ್ಕ್ಹಂ 11813.—ರೆ. ಫೈ. 233—92ನೇ ನಂಬರ್ ಇಸ್ತಿಹಾರ್‌ನಾಮೆ B ಆರ್ಟಿಕ್ಲ್ ಆದ ಕೇಂದಿ ಜಿಲ್ಲರೆ ವಾರಾಟದ ಲೈಸೆನಿನ 4ನೇ ಷರತ್ತಿನಲ್ಲಿ ಬರುವ ಮೊದಲನೇ ವಾಕ್ಯವಾದ ಇದರಡಿ ಕಾಣಿಸಿರುವದಕ್ಕೆ ಅಂದರೆ:—

"ಬಲತಗ್ಗಿಸಲ್ಪಟ್ಟ ಯಾ ಪರಿಕೆ ಮಾಡಲ್ಪಟ್ಟ ಕೇಂದಿಯಾಗಲಿ ಅಥವಾ ಎರಡು ದಿವಸಗಳಿಗೆ ಮುಂಚಿತವಾಗಿ ಉತಾರ್ ಮಾ "ಡಲ್ಪಟ್ಟ ಕೇಂದಿಯಾಗಲಿ ಬಿಕರಿ ಮಾಡಲ್ಪಡಕೂಡದು." ಎಂಬದಕ್ಕೆ ಬದಲಾಗಿ.

"ಬಲ ತಗ್ಗಿಸಲ್ಪಟ್ಟ ಅಥವಾ ಪರಿಕೆ ಮಾಡಲ್ಪಟ್ಟ ಕೇಂದಿ ಆಗಲಿ ಅಥವಾ ಎರಡು ದಿವಸಗಳಿಗೆ ಮುಂಚಿತವಾಗಿ ಉತಾರ್ ಮಾಡ "ಲ್ಪಟ್ಟ ಕೇಂದಿ ಆಗಲಿ ಬಿಕರಿ ಮಾಡಲ್ಪಡಕೂಡದು ವ ಬಿಕರೀ ಬಗ್ಗೆ ಕೊಡಲ್ಪಡಕೂಡದು. ಮತ್ತು ದುರ್ಕಾಗಳಲ್ಲಿ ಇಡಲ್ಪಡಲೂ ಕೂ "ಡದು" ಎಂಬ ಮಾತುಗಳನ್ನು ಕೇರಿಸತಕ್ಕದ್ದು.

ತಾರೀಖು 26ನೇ ಮಾರ್ಚ 1896.

ನಂ. 8947.—ಯಕ್ಸ್. 274.—1892ನೇ ಇಸವಿ ಮಾರ್ಚ 30ನೇ ಮಾರ್ಕ್ಹಂ 495ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ ನಾಮೆಯ 5ನೇ ರೂಲಿನ 4ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರಬರಿಯಾದನ್ನ ಕೇರಿಸತಕ್ಕದ್ದು.

"ಹಳೇ ಸಾರಾಯಿ ಅಂದರೆ 10 ದಿವಸಗಳು ಯಾ ಅದಕ್ಕೆ ಜಾಸ್ತಿ ಕಾಲದ ಸಾರಾಯಿಯು ಡಿಸ್ಟಿಲೇರಿಯಿಂದ ಯಾವಾಗ್ಯೂ ಕೊ "ಡಲ್ಪಟ್ಟು 50 ಮೈಲಿ ಫಾಸಲೆ ವಳಗೆ ಇರತಕ್ಕ ಡಿಪೋಗಳಿಗೆ 20° ಡಿಗ್ರಿ ಅಂಡರ್ ಪ್ರೂಫಿಗೆ ಪ್ಯಾಸ್ ಮಾಡಲ್ಪಡತಕ್ಕದ್ದು ಮತ್ತು "ಡಿಸ್ಟಿಲೇರಿಯಿಂದ 50 ಮೈಲಿಗಳಿಗಿಂತ ಜಾಸ್ತಿ ಫಾಸಲೆ ಇರತಕ್ಕ ಡಿಪೋಗಳಿಗೆ 19·5 ಡಿಗ್ರಿ ಅಂಡರ್‌ಪ್ರೂಫ್ ಹಳ್ಳ ಸಾರಾಯಿಯು "ಪ್ಯಾಸ್ ಮಾಡಲ್ಪಟ್ಟು 20° ಡಿಗ್ರಿ ಅಂಡರ್‌ಪ್ರೂಫಿಗೆ ಚಾರ್ಜು ಮಾಡಲ್ಪಡತಕ್ಕದ್ದು. ಪರಂತು ದಾಸ್ತ್ ಇಲ್ಲದ ಸಬಬಿನಿಂದ ಅಥವಾ "ಮತ್ತೊವ ಕಾರಣದಿಂದಲಾದರೂ ಅಂಥಾ ಹಳೇ ಸಾರಾಯಿ ಇಲ್ಲದೆ ಇದ್ದು ಹೊಸ ಸಾರಾಯಿ ಅಂದರೆ 10 ದಿವಸಕ್ಕಿಂತ ಕಮ್ಮಿ ದಿವಸ "ದ ಸಾರಾಯಿ ಕೊಡಬೇಕಾದ ಅವಶ್ಯಕ ಕಂಡುಬಂದರೆ ಅಂಥಾ ಹೊಸ ಸಾರಾಯಿಯು ಡಿಸ್ಟಿಲೇರಿಯಿಂದ 50 ಮೈಲಿಗಳಿಗಿಂತ ಕಮ್ಮಿ "ಫಾಸಲೆಯಿಲ್ಲಿರುವ ಡಿಪೋಗಳಿಗೆ 19·5° ಅಂಡರ್‌ಪ್ರೂಫ್ ಡಿಗ್ರಿಗೆ ಪ್ಯಾಸ್ ಮಾಡಲ್ಪಡತಕ್ಕದ್ದಲ್ಲದೆ 50 ಮೈಲಿಗಿಂತ ಜಾಸ್ತಿ ಫಾಸಲೆಯಲ್ಲಿ "ರುವ ಡಿಪೋಗಳಿಗೆ 19° ಡಿಗ್ರಿ ಅಂಡರ್‌ಪ್ರೂಫಿಗೆ ಪ್ಯಾಸ್ ಮಾಡಲ್ಪಟ್ಟು 20° ಡಿಗ್ರಿ ಅಂಡರ್ ಪ್ರೂಫಿಗೆ ಚಾರ್ಜು ಮಾಡಲ್ಪಡತಕ್ಕದ್ದು."

ಹುಕುಂ ಬಮೋಜೇಬ್,
ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮಿಲಿಟರಿ.

ಇನಿ ಹಾರ್‌ನಾಮಾ.

ತಾರೀಖು 21ನೇ ಮಾರ್ಚ 1896.

ಮೈಸೂರ್ ಸವಾರ್ ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ ಈ ಕೆಳಗೆ ಕಂಡ ಬಡ್ತಿಗಳು 1896ನೇ ಮಾರ್ಚ 21ನೇ ಮಾರ್ಕ್ಹಂ ಲಾಗಾಯತು ಮಾಡಲ್ಪಟ್ಟಿರುತ್ತವೆ:—

ಹೆಸರು	ಹುದ್ದೆ. ಇಂದ	ಹುದ್ದೆ. ಗೆ.	ಪರಾ
ಟಿ. ನಂಜರಾಜ ಅರಸರು	ಜವಾದಾರ್ ಟ್ರೂಪ್ ಆಫಿಸರ್	ಜವಾದಾರ್ ಟ್ರೂಪ್ ಕ್ವಾರ್ಟರ್ ಮ್ಯಾಸ್ಟರ್	ವರ್ಷ ಮೇಲೆ ನಿವೃತ್ತರಾದ ಇನ್ಸ್ಪೆಯಿಲ್ ಬೇಗರಿಗೆ ಬದಲಾಗಿ.
ಎಂ. ನಂಜರಾಜ ಅರಸರು	ಪ್ರೊಬೇಷನರ್	ಜವಾದಾರ್ ಟ್ರೂಪ್ ಆಫಿಸರ್	ಬಡ್ತಿ ಮಾಡಲ್ಪಟ್ಟ ಟಿ. ನಂಜರಾಜ ಅರಸನವರಿಗೆ ಬದಲಾಗಿ.
ಸೈಯ್ಯದ್ ಫತ್ತಾಲಾಯವರು	ದಫಾದಾರ್ ಮೇಜರ್	ಪ್ರೊಬೇಷನರ್	ಬಡ್ತಿ ಮಾಡಲ್ಪಟ್ಟ ಎಂ. ನಂಜರಾಜ ಅರಸನವರಿಗೆ ಬದಲಾಗಿ.
ರಾಮಚಂದ್ರರಾವಪಂತ್‌ಯವರು.	ದಫಾದಾರ್	ಡಿಟೋ	ವರ್ಷ ಮೇಲೆ ನಿವೃತ್ತರಾದ ಯಲ್ಲಿ ಯಾಸ್ ಖಾನರಿಗೆ ಬದಲಾಗಿ.

ತಾರೀಖು 24ನೇ ಮಾರ್ಚ 1896.

ಮಿಲಿಟರಿ ಸೆಕ್ರೆಟರಿ ಯವರಿಗೆ ಪರ್ಸನಲ್ ಅಸಿಸ್ಟೆಂಟರಾದ ಮೆಸ್ಟರ್ ಯಚ್. ಡಾರ್ಯಯವರು, ಮಿಲಿಟರಿ ಇಲಾಖೆಯಲ್ಲಿ ಗವರ್ನಮೆಂ ಟ್ ಅಸಿಸ್ಟೆಂಟ್ ಸೆಕ್ರೆಟರಿಯಾಗಿ 1896ನೇ ಮಾರ್ಚ 20ನೇ ಮಾರ್ಕ್ಹಂ ಲಾಗಾಯತು ಪೊಕರರ್ಯಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೇಬ್,
ಜೆ. ದೇಸರಾಜ್ ಅರಸ್, ಲೆ॥ ಕರ್ನಲ್,
ಆಫಿಷಿಯೇಟಿಂಗ್ ಮಿಲಿಟರಿ ಸೆಕ್ರೆಟರಿ.